# ಬದಲಾವಣೆ ಎಂಬ ನಿತ್ಯಚೈತ್ರ



ಮಕ್ಕಳ ಮನಸ್ಸು ಹೊಸ ಹೊಸ ವಿಷಯಗಳತ್ತ ಹಾರುತ್ತಲೇ ಇರುತ್ತದೆ. ಹಲವು ದಿಕ್ಕುಗಳಲ್ಲಿ ಹರಿಯುವ ಮಕ್ಕಳ ಮನಸ್ಸು ನಿರ್ದಿಷ್ಟ ಸಂಗತಿಯೊಂದಲ್ಲಿ ನೆಲೆ ನಿಲ್ಲುವವರೆಗೆ ಕಾಯುವ ಸಂಯಮವನ್ನು ಪೋಷಕರು ಹೊಂದಿರಬೇಕು.

■ ಸ್ವಯಂಪ್ರಭಾ

'ಈ ಬಾರಿ ಸ್ವಲ್ಪ ಮಾರ್ಕು ಕಮ್ಮಿ ಬಂದಿದೆ. ಮುಂದಿನ ವರ್ಷ ಪರೀಕ್ಷೆಯಲ್ಲಿ ಚೆನ್ನಾಗಿ ಮಾಡುತ್ತಾನೆ' – ಹೀಗೆ ಅಜ್ಜಿಯೋ ಅಜ್ಜನೋ ಮೊಮ್ಮಗನನ್ನು ಸಮರ್ಥಿಸುವುದು ಸಹಜ.

*

ಅಬ್ಬಬ್ಬಾ... ಎಷ್ಟು ಕೀಟಲೆಯ ಹುಡುಗ ಆಗಿದ್ದ ಅವ. ನಾಲ್ಕನೇ ತರಗತಿಯಲ್ಲಿ ನಾಯಿಯ ಬಾಲಕ್ಕೆ ಪಟಾಕಿ ಕಟ್ಟಿ ಇಡೀ ವಠಾರದಲ್ಲಿ ಜಗಳ ಆಗುವ ಹಾಗೆ ಮಾಡಿದ್ದ. ಇವ ದೊಡ್ಡವನಾಗಿ ರೌಡಿಶೀಟರೇ ಆಗುವುದು ಅಂತ ನಾಯಿಯ ಓನರ್ ಕೂಗಾಡಿದ್ದರು. ಈಗ ನೋಡಿದರೆ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದವರ ಸಾಲಿನಲ್ಲಿ ಇವನ ಫೋಟೊ ಇದೆಯಲ್ಲ!

*

ಅವಳು ಪ್ರತೀ ತರಗತಿಯಲ್ಲಿಯೂ ಫಸ್ಟ್ ಬರುತ್ತ ಜಾಣೆ ಅನಿಸಿಕೊಂಡಿದ್ದಳು. ಒಂಬತ್ತನೇ ತರಗತಿಗೆ ಬಂದಿದ್ದೇ ಅವಳಿಗೇನಾಯಿತೋ, ಓದುವುದು ಬಿಟ್ಟು ಸ್ಪೋರ್ಟ್ಸ್ ಹುಚ್ಚು ಹಿಡಿಸಿಕೊಂಡಳು. ಇದ್ದಕ್ಕಿದ್ದಂತೆಯೇ ಈಜು ಸ್ಪರ್ಧೆಗಳಲ್ಲಿ ಭಾಗವಹಿಸುತ್ತ, ಸಾಧನೆ ಮಾಡುವುದೇ ಇಷ್ಟವಾಗಿಬಿಟ್ಟಿತು. ಪ್ರಾಥಮಿಕ ಹಂತದಲ್ಲಿ ಓದಿದಂತೆಯೇ ಓದಿದ್ದರೆ, ಎಸ್ಸೆಸ್ಸೆಲ್ಸಿಯಲ್ಲಿ ಖಂಡಿತಾ ಟಾಪರ್ ಆಗುತ್ತಿದ್ದಳು... ಛೇ.

*

ಬದಲಾವಣೆಗಳು ಯಾಕೆ ನಡೆಯುತ್ತವೆ ಎಂಬ ಪ್ರಶ್ನೆಗೆ ಒಬ್ಬೊಬ್ಬರೂ ಒಂದೊಂದು ವಿಶ್ಲೇಷಣೆಯನ್ನು ಕೊಡಬಹುದೇ ಹೊರತು, ನಿಜಕ್ಕೂ ಬದಲಾವಣೆಗಳ ಕುರಿತು ಸಾರ್ವಕಾಲಿಕವಾಗಿ ಅನ್ವಯಿಸುವ ತರ್ಕ ಮಂಡಿಸುವುದು ಸಾಧ್ಯವಿಲ್ಲ. ಜೀವನದ ಹಾದಿಯಲ್ಲಿ ಒಂದೊಂದು ಕಾಲದಲ್ಲಿ ಒಂದೊಂದು ವಿಚಾರದ ಬಗ್ಗೆ ಆಸಕ್ತಿ ಮೂಡಿಬಿಡುತ್ತದೆ. ಸರ್ವಕಾಲಕ್ಕೂ ಸಲ್ಲುವಂತಹ ವಾಕ್ಯವೊಂದನ್ನು ಗೋಡೆಯ ಮೇಲೆ ಬರೆಯುವಂತೆ ಶ್ರೀಕೃಷ್ಣ ಪರಮಾತ್ಮ, ಅರ್ಜುನನಿಗೆ ಸೂಚಿಸಿದನಂತೆ. ಬಹಳ ಯೋಚಿಸಿದ ನಂತರ ಅರ್ಜುನ, 'ಈ ಸಮಯ ಶಾಶ್ವತವಲ್ಲ' ಎಂದು ಗೋಡೆಯಮೇಲೆ ಬರೆದನಂತೆ. ಇಂದು ಇರುವ ಸೋಲಾಗಾಲಿ, ಯಶಸ್ಸಾಗಲೀ ಶಾಶ್ವತವಲ್ಲ. ಹಾಗಿದ್ದಮೇಲೆ, ಮಕ್ಕಳು ಓದುತ್ತಿಲ್ಲ, ಆನ್‌ಲೈನ್ ಕ್ಲಾಸ್ ನೋಡುತ್ತಿಲ್ಲ ಎಂಬುದಾಗಿ ಅವರನ್ನು ದಬಾಯಿಸುವ, ಅವರ ಮೇಲೆ ಒತ್ತಡ ಹೇರುವ ಧಾವಂತವಾದರೂ ಏಕೆ?

ಮಕ್ಕಳ ಆಸಕ್ತಿಗಳು ಖಂಡಿತಾ ಬೆಳೆಯುತ್ತವೆ, ವಿಕಾಸ ಹೊಂದುತ್ತವೆ. ಅವರ ಸಂಪರ್ಕಕ್ಕೆ ಬರುವ ಶಿಕ್ಷಕರು ಅವರ ಮೇಲೆ ಪ್ರಭಾವ ಬೀರಬಹುದು. ಸ್ನೇಹ ಸಂಪರ್ಕ, ವಾತಾವರಣ ಅಷ್ಟೇ ಏಕೆ, ಯಾವುದೋ ಸೋಲು ಕೂಡ ಅವರಲ್ಲಿ ಅವುಡುಗಚ್ಚಿ ಮೇಲೆದ್ದು ನಿಲ್ಲುವಂತಹ ಛಲವನ್ನು ಮೂಡಿಸಬಲ್ಲುದು.

ಮಕ್ಕಳ ಮನಸ್ಸು ಹಣಕಾಸಿನ ದೃಷ್ಟಿಯಿಂದ ಯೋಚಿಸುವುದನ್ನು ಕಲಿತಿರುವುದಿಲ್ಲ. ತಮಗೇನು ಇಷ್ಟವೋ ಆ ವಿಚಾರಗಳಲ್ಲೇ ಮುಳುಗಿರಲು ಎಳೆಯರು ಬಯಸುತ್ತಾರೆ. ದೊಡ್ಡವರ ಮನಸ್ಸು ಮಾತ್ರ ಸದಾ ಹಣಕಾಸಿನ ಸುತ್ತಲೇ ಗಿರಕಿ ಹೊಡೆಯುತ್ತಿರುತ್ತದೆ. ಮಕ್ಕಳ ಆಸಕ್ತಿಯ ಕ್ಷೇತ್ರಕ್ಕೆ ಹಣಕಾಸಿನ ಬಣ್ಣವನ್ನು ಹಚ್ಚದೇ ಇರುವ ಸಂಯಮವನ್ನು ದೊಡ್ಡವರು ವಹಿಸಬೇಕು. ಶಾಲೆ, ಕಾಲೇಜು ಹಂತಗಳಲ್ಲಿ ತಕ್ಕಮಟ್ಟಿಗೆ ಚೆನ್ನಾಗಿಯೇ ಅಂಕಗಳನ್ನು ತೆಗೆಯುತ್ತಿದ್ದ ಸಮತಾ, ಕೆಮಿಸ್ಟ್ರಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಳು. ಇನ್ನೇನು ಬೋಧನಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವ ಮಗಳಿಗೆ ಸರ್ಕಾರಿ ಕಾಲೇಜಿನಲ್ಲಿ ಒಂದು ಹುದ್ದೆ ದೊರಕಿಸಿಕೊಟ್ಟರೆ ತಾನು ಗೆದ್ದಂತೆಯೇ ಎಂದು ಅವಳ ತಂದೆ ಲೆಕ್ಕಾಚಾರ ಹಾಕುತ್ತಿದ್ದರು. ಮಗಳು ಸ್ನಾತಕೋತ್ತರ ಪರೀಕ್ಷೆಗಳನ್ನೆಲ್ಲ ಮುಗಿಸಿ ಬಂದವಳೇ, ತಂದೆಯೊಂದಿಗೆ ತನ್ನ ಆಸಕ್ತಿಯ ಕ್ಷೇತ್ರದ ಬಗ್ಗೆ ವಿಸ್ತಾರವಾಗಿ ಮಾತನಾಡಿದಳು. 'ಅಪ್ಪ, ಇಷ್ಟು ವರ್ಷಗಳಲ್ಲಿ ಒಂದಲ್ಲ ಒಂದು ಪರೀಕ್ಷೆಗೆ ಸಿದ್ಧತೆ ಮಾಡುತ್ತ, ಅವುಗಳನ್ನು ಬರೆಯುತ್ತಾ, ಪಾಸಾಗುವುದು, ಹೆಚ್ಚು ಅಂಕಗಳನ್ನು ತೆಗೆಯುವ ಗಡಿಬಿಡಿಯಲ್ಲಿಯೇ ಇದ್ದೆ. ಆಗಾಗ ನನಗೆ, ಬುಡಕಟ್ಟು ಜನಾಂಗದ ಮಕ್ಕಳ ಶಾಲೆಗಳಲ್ಲಿ ಕೆಲಸ ಮಾಡಬೇಕು ಎಂದು ಬಹಳ ಅನಿಸುತ್ತಿತ್ತು. ಆದರೆ ಶಿಕ್ಷಣದ ಮಧ್ಯೆಯೇ ನಾನು ಅಂತಹ ಯೋಚನೆಗಳನ್ನು ಹೇಳಿದರೆ, ನಿಮಗೆ ಅದು ಹೊರೆಯಾದೀತು ಅಂತ ಎಂದು ಸುಮ್ಮನಿದ್ದೆ. ಈಗ ಬೆಂಗಳೂರಿನಲ್ಲಿ ₹ 50 ಸಾವಿರ ಸಂಬಳ ಪಡೆಯುವ ವೃತ್ತಿಹಿಡಿಯುವ ಬದಲು, ಕಾಡಿನ ನಡುವೆ ಕೆಲಸ ಮಾಡುವ ಅವಕಾಶಗಳಿದ್ದರೆ ಅದನ್ನು ಆರಿಸಿಕೊಳ್ಳೋಣ ಎಂದಿದ್ದೇನೆ. ಬೆಂಗಳೂರಿಗಿಂತ ನನ್ನ ಪಾಠ ಪ್ರವಚನಗಳು, ಕಾಡಿನ ಮಕ್ಕಳಿಗೆ ಹೆಚ್ಚು ಅಗತ್ಯವಿದೆ ಎನಿಸುತ್ತದೆ'.

ಮಗಳು ಹೇಳಿದ ಈ ಮೇಲಿನ ವಿಷಯವನ್ನು ಅಪ್ಪನಿಗೆ ಜೀರ್ಣಿಸಿಕೊಳ್ಳುವುದು ಸುಲಭವಿರಲಿಲ್ಲ. ಮಗಳು ತಮ್ಮನ್ನು ದಾಟಿ, ಬೇರೆಯೇ ದಿಕ್ಕಿನಲ್ಲಿ ಯೋಚಿಸುವಷ್ಟು ಬೆಳೆದಿದ್ದಾಳೆ ಎನ್ನುವುದು ಅವರಿಗೆ ಅರಿವಾಯಿತು. ಅಪ್ಪ ಅಮ್ಮನ ವಾದವನ್ನು ಶಾಂತವಾಗಿಯೇ ಎದುರಿಸಿದ ಸಮತಾ, ಕಾಡಿನ ನಡುವೆ ವಾಸ ಮಾಡಲು ವೃತ್ತಿಯೊಂದನ್ನು ಹುಡುಕಿಕೊಂಡಳು.

ಹೀಗೆ ಮಕ್ಕಳು ಕೊಡುವ ಅನಿರೀಕ್ಷಿತ ತಿರುವುಗಳಿಗಾಗಿ ಸಂಯಮದಿಂದ ಕಾಯಬೇಕಷ್ಟೆ. 'ನೀನು ಈ ಜೀವನದಲ್ಲಿ ಉದ್ಧಾರ ಆಗುವುದಿಲ್ಲ' ಎನ್ನುವ ನಿರ್ಣಯಾತ್ಮಕ ಬೈಗಳನ್ನು ಮಕ್ಕಳಿಗೆ ಹೇಳುತ್ತೇವೆಂದರೆ, ಅದು ಪಾಲಕರ ಸೋಲನ್ನು ಸೂಚಿಸುತ್ತದಷ್ಟೇ.

ಪ್ರತಿಕ್ರಿಯಿಸಿ: feedback@sudha.co.in